

ತನ್ನ ಸ್ವರ್ಣಾಭರಣಗಳನ್ನೆಲ್ಲ ತಂದು ತಂದು ಇನ್ನೊಂದು ತಟ್ಟೆಗೆ ಅಡಕಿದಳು. ಅವಳ ಆಭರಣವೆಲ್ಲ ಬರಿದಾಯಿತೇ ಹೊರತು, ಕೃಷ್ಣನ ತೂಕಕ್ಕೆ ಅದು ಸಮನಾಗಲಿಲ್ಲ. "ಈಗ ನೀವೇ ಏನಾದರೂ ಮಾಡಬೇಕು ನಾರದರೇ" ಎಂದು ಸತ್ಯಭಾಮೆಯು ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟಳು. ಆಗ ನಾರದರು, "ರುಕ್ಮಿಣಿಯನ್ನೊಮ್ಮೆ ಕೇಳಿ ನೋಡು ತಾಯೆ, ಅವಳ ಆಭರಣಗಳನ್ನೂ ತೂಗಿಸು" ಎಂದರು. ಸತ್ಯಭಾಮೆಗೆ ಅದು ಇಷ್ಟವಿಲ್ಲದಿದ್ದರೂ ಪತಿದೇವರನ್ನು ಕಳೆದುಕೊಳ್ಳಬೇಕಲ್ಲಾ ಎಂಬ ಸಂಕಟದಿಂದ ಅಸಹಾಯಕಳಾಗಿ, "ನೀನೂ ಬಾ ರುಕ್ಮಿಣಿ, ಸಹಾಯ ಮಾಡು" ಎಂದಳು.

ಆಗ ರುಕ್ಮಿಣಿಯು "ಹದಿನಾಲ್ಕು ಲೋಕಗಳ ಸಂಪತ್ತನ್ನೆಲ್ಲ ತಂದು ಸುರಿದರೂ ಈ ಸ್ವಾಮಿಗೆ ಸಮನಾಗಿ ಅದು ತೂಗಬಲ್ಲದೇ ಅಕ್ಕ, ಜಗತ್ತಿಗೆಲ್ಲ ಸೇರಿದ ಅವನನ್ನು ನಾನೇ ಕಟ್ಟಿಹಾಕಿಕೊಳ್ಳುತ್ತೇನೆಂದರೆ, ಅದು ನಡೆಯುವುದುಂಟೇ ಅಕ್ಕ, ಅದೆಲ್ಲ ಈಗ ಬೇಡ" ಎನ್ನುತ್ತ ರುಕ್ಮಿಣಿಯು ಒಂದು ತುಳಸೀಪತ್ರದ ಮೇಲೆ 'ಶ್ರೀಕೃಷ್ಣ' ಎಂದು ಬರೆದು, ಸತ್ಯಭಾಮೆಯ ಆಭರಣಗಳು ತುಂಬಿದ್ದ ತಟ್ಟೆಯೊಳಕ್ಕೆ ಹಾಕುತ್ತ "ದೇವದೇವೋತ್ತಮನೆ, ದೇವತಾಸಾರ್ವಭೌಮನೆ, ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕನೇ, ನಿನ್ನಲ್ಲಿ ಎಳ್ಳನಿತು ಭಕ್ತಿ ನನ್ನ ಹೃದಯದಲ್ಲೇನಾದರೂ ಇದ್ದರೆ ನೀನು ಸಮನಾಗಿ ತೂಗಿಬಿಡು ಸ್ವಾಮಿ" ಎಂದು ನಮಸ್ಕರಿಸಿ ಮೇಲೆದ್ದಳು. ಒಂದು ಕೃಷ್ಣನಾಮವೇ ಸಾಕಾಗಿ, ತಕ್ಕಡಿ ಸಮನಾಗಿ ತೂಗಿಬಿಟ್ಟಿತು, ಮೀರಿಬಿಟ್ಟಿತು, ತೂಗಾಡಿಬಿಟ್ಟಿತು. ಆಗಲೇ ಸತ್ಯಭಾಮೆಯ ಗರ್ವರಸವೆಲ್ಲ ಸೋರಿಬಿಟ್ಟಿತು.

ನಾನು ಒಬ್ಬ ದೊಡ್ಡ ಮನುಷ್ಯ, ನಾನು ಅಂಥವನು, ಇಂಥವನು ಎಂಬೀ ಅಹಂಕಾರಗಳೆಲ್ಲ ಹೋಗದ ಹೊರತು ಭಗವಂತನ ಸಾಕ್ಷಾತ್ಕಾರ ಪಡೆದುಕೊಳ್ಳಲಾಗುವುದಿಲ್ಲ. 'ಅಹಂ' ಎಂಬ ಗುಡ್ಡವನ್ನು 'ಭಕ್ತಿ' ಎಂಬ ನೀರಿನಿಂದ ನೆನೆಯಿಸಿ ನೆಲಸಮ ಮಾಡಿಬಿಡಬೇಕು ಎಂಬ ಪರಮಹಂಸರ ವಾಣಿಯನ್ನು ಈ ಸಂದರ್ಭಕ್ಕೆ ಜೋಡಿಸಿಕೊಂಡು, ಸತ್ಯಭಾಮೆಯನ್ನೂ ರುಕ್ಮಿಣಿಯನ್ನೂ ನೋಡಬೇಕು.

'ಶ್ರೀರಾಮಕೃಷ್ಣ ವಚನವೇದ'ದಲ್ಲಿಯೇ ತುಲಾಭಾರದ ಈ ದೃಷ್ಟಾಂತವು ಬಂದಿದೆ. ಪರಮಹಂಸರು ಭಾವಾವಿಷ್ಟರಾಗಿ ಒಬ್ಬರೇ ನಡೆದುಹೋಗುತ್ತಿದ್ದಾಗ ಆಯತಪ್ಪಿ ನೆಲಕ್ಕೆ ಬಿದ್ದು ಅವರ ಎಡಗೈ ತೋಳಿನ ಕೀಲು ಜಾರಿ ನೋವಿಗೆ ತುತ್ತಾದರು. ಅದನ್ನು ಸರಿಪಡಿಸಲು ಮಧುಸೂದನ ಎಂಬ ವೈದ್ಯನು ದಬ್ಬೆಯ ತುಂಡುಗಳು, ಬಟ್ಟೆಯ ಪಟ್ಟಿಗಳ ಸಹಿತವಾಗಿ ಬಂದನು. ಅವನನ್ನು ನೋಡುತ್ತ ಪರಮಹಂಸರು ಬಾಲಕನಂತೆ ನಗುತ್ತ "ನೀನು ಇಹಪರಗಳ ಮಧುಸೂದನನಪ್ಪಾ" ಎಂದು ಅಕ್ಕರೆಯ ಮಾತನಾಡಿದರು. ಅದಕ್ಕೆ ವೈದ್ಯನು "ಮಧುಸೂದನ ಎಂಬ ಹೆಸರಿನ ಹೊರೆಯನ್ನಷ್ಟೇ ನಾನು ಹೊತ್ತುಕೊಂಡಿದ್ದೇನೆ ಮಹಾರಾಜ್" ಎಂದು ವಿನೀತಭಾವದಿಂದ ಹೇಳಿದನು. ಆಗ ಪರಮಹಂಸರು "ಹೆಸರಿನ ಮಹಿಮೆಯೇನೂ ಕಡಿಮೆಯೆಂದು ತಿಳಿಯಬೇಡ. ಭಗವಂತನಿಗೂ ಅವನ ಹೆಸರಿಗೂ ವ್ಯತ್ಯಾಸವೇನಿಲ್ಲ" ಎನ್ನುತ್ತ ತುಲಾಭಾರದ ಕಥೆಯನ್ನು ಆಗಲೇ ಹೇಳಿಬಿಟ್ಟರು. "ಸತ್ಯಭಾಮೆಯು ಚಿನ್ನ, ರತ್ನ, ಮಾಣಿಕ್ಯ ಇವುಗಳಿಂದ ಶ್ರೀಕೃಷ್ಣನನ್ನು ತುಲಾಯಂತ್ರದಲ್ಲಿ ತೂಗಲು ಪ್ರಯತ್ನಮಾಡಿದಾಗ, ಆಕೆ ತಕ್ಕಡಿತಟ್ಟೆಗಳನ್ನು ಒಂದು ಸಮ ತೂಕಕ್ಕೆ ತರಲಾಗಲಿಲ್ಲ. ಆಗ ರುಕ್ಮಿಣಿ ತುಳಸಿ ಎಲೆಯ ಮೇಲೆ ಕೃಷ್ಣನ ಹೆಸರನ್ನು ಬರೆದು, ತೂಕದ ತಟ್ಟೆಗೆ ಹಾಕಿದಳು. ಒಡನೆ ತೂಕ ಸರಿಹೋಗಿಬಿಟ್ಟಿತು" ಎಂದು ನಗುತ್ತಲೇ ಹೇಳುತ್ತ, ನಗುತ್ತಲೇ ತೋಳಿಗೆ ಪಟ್ಟಿಹಾಕಿಸಿಕೊಂಡರು.

ಸನಾತನ ಹಿಂದೂಧರ್ಮಕ್ಕೆ ಸೇರಿದ ಜನರು ಶಬ್ದಗಳಿಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ವೇದಗಳು ಶಬ್ದಮಯವಾಗಿದ್ದು, ಅವುಗಳನ್ನು ಶ್ರುತಿ ಎಂದು ಕರೆಯುತ್ತಾರೆ. ಗುರು ಉಚ್ಚರಿಸಿದ ಶಬ್ದರಾಶಿಯನ್ನೇ ತಾನೂ ಎಚ್ಚರದಿಂದ ಕೇಳಿಸಿಕೊಂಡು ಕಲಿತುಕೊಳ್ಳುವುದೇ ಶ್ರುತಿ. ಅಲ್ಲಿ ಶಬ್ದಗಳ ಉಚ್ಚಾರಣೆ ನಿರ್ದಿಷ್ಟವಾದ ಏರಿಳಿತಗಳಲ್ಲಿಯೇ ಆಗಬೇಕು. ಆ ಶಬ್ದಗಳೇ ದೇವರು. ಹಾಗೆಯೇ ರಾಮ, ಕೃಷ್ಣ, ಶಿವ, ದುರ್ಗ ಎಂಬ ಶಬ್ದಗಳೇ ದೇವರು. ಸನಾತನ ಮನಸ್ಸಿನಲ್ಲಿರುವ ಭಾವನೆಯ ವಿಷಯೀಕರಣವೇ ದೇವರು. ನಮಗಿಂತ ನಮ್ಮ ಹೆಸರು ಅನಂತವಾಗಿ ಪೂರ್ಣವಾಗಿದೆ. ಹಾಗೆಯೇ ದೇವರ ಹೆಸರು, ದೇವರಿಗಿಂತ ದೊಡ್ಡದು ಎಂದು ವಿವೇಕಾನಂದರು ಈ ತುಲಾಭಾರದ ಸನ್ನಿವೇಶವನ್ನು ವಿಶ್ಲೇಷಣೆ ಮಾಡಿದ್ದಾರೆ. ಆದ್ದರಿಂದಲೇ ಕೃಷ್ಣನ ತೂಕಕ್ಕಿಂತ ಅವನ ನಾಮದ ತೂಕವೇ ಹೆಚ್ಚಾಗಿಹೋಯಿತು. *

# ಗುರುಪೂರ್ಣಿಮೆ

ಎಚ್.ಎಲ್.ಸೀತಾದೇವಿ

ಭಾರತದೆಲ್ಲೆಡೆ ಹಲವು ರೀತಿಯಿಂದ ಆಚರಿಸಲ್ಪಡುತ್ತಿರುವ ಗುರುಪೂರ್ಣಿಮೆ ನಮ್ಮ ಸಂಸ್ಕೃತಿಯ ಶ್ರದ್ಧೆ, ವಿಶ್ವಾಸಗಳ ದ್ಯೋತಕವಾಗಿದೆ. ಈ ವಿಶಿಷ್ಟ ಹಬ್ಬವನ್ನು ಕುರಿತು ವಿಚಾರಪೂರ್ಣ ಲೇಖನವನ್ನು ಬರೆದಿರುವ ಲೇಖಕಿ 'ಆಕಾಶವಾಣಿ'ಯಲ್ಲಿ ವಾರ್ತಾವಾಚಕಿಯಾಗಿ, 'ಕನ್ನಡಪ್ರಭ' ದೈನಿಕದಲ್ಲಿ ಉಪಸಂಪಾದಕಿಯಾಗಿ ಸೇವೆ ಸಲ್ಲಿಸಿದ್ದರು.

**ಅಚತುರ್ವದನೋ ಬ್ರಹ್ಮ ದ್ವಿಬಾಹುರಪರೋ ಹರಿಃ ।**
**ಅಫಾಲಲೋಚನಃ ಶಂಭುಃ ಭಗವಾನ್ ಬಾದರಾಯಣಃ ॥**

ಆಷಾಢಮಾಸದ ಹುಣ್ಣಿಮೆ ತುಂಬಾ ಪವಿತ್ರವಾದ ದಿನ. ಗುರುವಿಗೆ ಕೃತಜ್ಞತೆ ಸಲ್ಲಿಸುವ ದಿನ. ನಮ್ಮ ಪರಂಪರೆಯಲ್ಲಿ ಗುರುವಿಗೆ ವಿಶೇಷವಾದ ಸ್ಥಾನವಿದೆ. ತಂದೆ, ತಾಯಿಗಳ ನಂತರದ ಸ್ಥಾನ ಗುರುವಿನದು. 'ಮಾತೃ ದೇವೋ ಭವ, ಪಿತೃ ದೇವೋ ಭವ, ಆಚಾರ್ಯ ದೇವೋ ಭವ' ಎನ್ನುವ ನಾಡು ನಮ್ಮದು. ಆಚಾರ್ಯ ಎಂದರೆ ಯಾರು?

**ಆಚಿನೋತಿ ಚ ಶಾಸ್ತ್ರಾರ್ಥಂ ಆಚಾರೇ ಸ್ಥಾಪಯತ್ಯಪಿ।**
**ಸ್ವಯಮಾಚರತೇ ಯಸ್ಮಾತ್ ತಸ್ಮಾತ್ ಆಚಾರ್ಯ ಉಚ್ಯತೇ॥**

ಶಾಸ್ತ್ರಗಳ ಅರ್ಥವನ್ನು ವಿಶ್ಲೇಷಿಸಿ, ರೂಢಿಗೆ ತರುವವನು ಆಚಾರ್ಯ. ಅವರು ರೂಢಿಗೆ ತಂದು ಸುಮ್ಮನಾಗುವುದಿಲ್ಲ, ಸ್ವತಃ ಪಾಲಿಸಿ, ಮೇಲ್ಪಂಕ್ತಿ ಹಾಕುವುದರಿಂದಲೇ ಆವರು ಆಚಾರ್ಯರು ಎನಿಸಿಕೊಳ್ಳುತ್ತಾರೆ.

ಆಚಾರ್ಯ, ಗುರು ಎಂಬುದಕ್ಕೆ ವಿವೇಕ ಚೂಡಾಮಣಿಯಲ್ಲಿ ಒಂದು ಒಳ್ಳೆಯ ವ್ಯಾಖ್ಯಾನವಿದೆ. **'ಅಧಿಗತ ತತ್ತ್ವಃ ಶಿಷ್ಯ ಹಿತಾಯ ಉದ್ಯತಃ ಸತತಮ್'** ಎನ್ನುತ್ತದೆ ಅದು. ಅಂದರೆ ತತ್ತ್ವಜ್ಞಾನವನ್ನು ಪಡೆದವನು, ನಿತ್ಯನಿರಂತರವಾಗಿ ಶಿಷ್ಯರ ಹಿತವನ್ನು ಬಯಸುವವನೇ ಗುರು. ಸ್ವಾರ್ಥ ಬಿಟ್ಟು, ಸಮಷ್ಟಿಯ ಹಿತಕ್ಕಾಗಿ ತುಡಿಯುವವನೇ ಗುರು.

ಗುರು, ಶಿಷ್ಯರು ನೇರ ಸಂಪರ್ಕದಲ್ಲಿ ಇಲ್ಲದಿರಬಹುದು. ಆದರೆ ಶಿಷ್ಯನಿಗೆ ಗುರುವಿನಲ್ಲಿ ಅಚಲವಾದ ಭಕ್ತಿ, ಶ್ರದ್ಧೆಗಳಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಏಕಲವ್ಯನೇ ಉದಾಹರಣೆ. ಹಸ್ತಿನಾಪುರದ ಸಮೀಪದಲ್ಲಿ ಒಂದು ಕಾಡು. ಅಲ್ಲೊಬ್ಬ ಬೇಡ, ಹಿರಣ್ಯಧನುಷ. ಅವನಿಗೊಬ್ಬ ಮಗ, ಅವನೇ ಏಕಲವ್ಯ. ಅವನಿಗೆ ಬಿಲ್ವಿದ್ಯೆಯಲ್ಲಿ ವಿಶೇಷವಾದ ಆಸಕ್ತಿ. ಹುಟ್ಟಿದ್ದೇ ಬೇಡರ ಕುಲದಲ್ಲಿ. ಆದ್ದರಿಂದ ಅಲ್ಪಸ್ವಲ್ಪ ಧನುರ್ವಿದ್ಯೆ ಗೊತ್ತಿತ್ತು. ಆದರೆ ಅದರಲ್ಲೇ ಪರಿಣತಿ ಪಡೆಯುವುದು ಅವನ ಹೆಬ್ಬಯಕೆಯಾಗಿತ್ತು. ಅದ್ವಿತೀಯ ಬಿಲ್ಲುಗಾರರಾದ ಆಚಾರ್ಯ ದ್ರೋಣರಿಂದಲೇ ಅದನ್ನು ಕಲಿಯುವ ಆಸೆ. ಆಚಾರ್ಯರ ಬಳಿಗೆ ಹೋಗಿ, ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಕೋರಿದ. ಅವರು ಒಪ್ಪಲಿಲ್ಲ. ಆದರೆ ಅವರನ್ನೇ ತನ್ನ ಗುರುವೆಂದುಕೊಂಡ ಏಕಲವ್ಯ ಕಾಡಿಗೆ ಹಿಂದಿರುಗಿ, ಗುರು ದ್ರೋಣಾಚಾರ್ಯರ ಪ್ರತಿಮೆಯನ್ನು ಮಾಡಿ, ಅದನ್ನು ಪೂಜಿಸಿ, ಸ್ವತಃ ಅಭ್ಯಾಸಕ್ಕೆ ತೊಡಗಿದ. ಹೀಗಿರುವಾಗ ಒಂದು ದಿನ ಪಾಂಡವರು ಬೇಟೆಗಾಗಿ ಅದೇ ಕಾಡಿಗೆ ಬಂದರು. ಅವರ ಜೊತೆ ಬಂದಿದ್ದ ಬೇಟೆ ನಾಯಿ ಒಂದೇಸಮನೆ ಬೊಗಳುತ್ತಿತ್ತು. ಬಿಲ್ವಿದ್ಯೆಯನ್ನು ಅಭ್ಯಾಸ ಮಾಡುತ್ತಿದ್ದ ಏಕಲವ್ಯನ ಏಕಾಗ್ರತೆಗೆ ಅದರಿಂದ ಭಂಗ ಉಂಟಾಯಿತು. ಅವನು ಶಬ್ದವೇಧಿಯಂತೆ ಒಂದರ ಹಿಂದೊಂದರಂತೆ ಏಳು ಬಾಣಗಳನ್ನು ಬಿಟ್ಟು, ನಾಯಿಯ ಬಾಯಿ ತುಂಬಿಸಿಬಿಟ್ಟ. ಅದು ಬೊಗಳಲಾರದೆ ಕುಂಯಿಗುಡುತ್ತಾ ಪಾಂಡವರ ಬಳಿಗೆ ಹಿಂದಿರುಗಿತು. ಅದನ್ನು ಕಂಡ ಅರ್ಜುನನಿಗೆ ತೀರಾ ವಿಸ್ಮಯವಾಯಿತು. ಅವನು ಈ ಅಸಾಮಾನ್ಯ ಬಿಲ್ಲುಗಾರ ಯಾರೆಂದು ಹುಡುಕಿಕೊಂಡು ಬಂದ. ಬೇಡರ ಬಾಲಕನನ್ನು 'ನಿನ್ನ ಗುರು ಯಾರು?' ಎಂದು ಪ್ರಶ್ನಿಸಿದ. 'ದ್ರೋಣಾಚಾರ್ಯರು' ಎಂಬ ಉತ್ತರ ಬಂತು. ಇದು, ಗುರುವಿನ ಪರೋಕ್ಷ ಅನುಗ್ರಹಕ್ಕೆ ಅತ್ಯುತ್ತಮ ಉದಾಹರಣೆ. ಗುರುಕಟಾಕ್ಷವಿದ್ದರೆ ಯಾವುದೂ ಅಸಾಧ್ಯವಲ್ಲ.

ನಮ್ಮದು ಅವಿಚ್ಛಿನ್ನವಾದ ಗುರು-ಶಿಷ್ಯ ಪರಂಪರೆ. ಗುರು ಅವ್ಯಾಜ ಕರುಣಾಮೂರ್ತಿ. ಅರ್ಪಣಾಭಾವದಿಂದ ಸಂಪೂರ್ಣ ಶರಣಾದರೆ, ಗುರು ಜ್ಞಾನದರ್ಶಿಯಾಗುತ್ತಾನೆ. ಒಬ್ಬನೇ ಗುರು ಎಲ್ಲ ಜನರ ಶ್ರೇಯಸ್ಸಿಗೆ ಹೇಗೆ ಕಾರಣನಾಗುತ್ತಾನೆ ಎಂದರೆ, ಒಬ್ಬನೇ ಸೂರ್ಯ ಲಕ್ಷೋಪಲಕ್ಷ ಕಮಲಗಳು ಅರಳಲು ಕಾರಣನಾಗುವುದಿಲ್ಲವೇ ಹಾಗೆಯೇ. ಮನಸ್ಸಿನಲ್ಲಿ ಧ್ಯಾನಿಸಿದರೂ ಸಾಕು, ಗುರು ಸನ್ಮಾರ್ಗದರ್ಶಿಯಾಗುತ್ತಾನೆ.

ಗುರುಪೂರ್ಣಿಮೆಯನ್ನು ವ್ಯಾಸಪೂರ್ಣಿಮಾ ಎಂದೂ ಹೇಳುತ್ತಾರೆ. ಬ್ರಹ್ಮವಿದ್ಯೆಯನ್ನು ಉಪದೇಶಿಸಿದ ಗುರುಪರಂಪರೆಗೆ ಪೂಜೆ ಸಲ್ಲಿಸುವ ದಿನ ಇದು. ಆಚಾರ್ಯ ಪರಂಪರೆಯಲ್ಲಿ ಅಗ್ರಗಣ್ಯರು ವೇದವ್ಯಾಸರು. ಜ್ಞಾನಸಾಗರ, ವಿದ್ಯಾಸಮುದ್ರ ಇತ್ಯಾದಿ ಬಿರುದಾಂಕಿತರು. ಅವರ ತಂದೆ ಧರ್ಮಶಾಸ್ತ್ರ ಕೋವಿದರಾಗಿದ್ದ ಪರಾಶರ ಮಹರ್ಷಿಗಳು. ಅವರು ಒಮ್ಮೆ ಯಮುನಾ ನದಿಯನ್ನು ದಾಟಬೇಕಾಗಿತ್ತು. ದಾಶರಾಜ ಧರ್ಮಾರ್ಥವಾಗಿ ಜನರನ್ನು ನದಿ ದಾಟಿಸುತ್ತಿದ್ದ. ಒಮ್ಮೊಮ್ಮೆ ಅವನ ಮಗಳೂ ಆ ಕೆಲಸ ಮಾಡುತ್ತಿದ್ದಳು. ಅವಳ ಹೆಸರು ಸತ್ಯವತಿ. ಅವಳ ಮೈಯಲ್ಲಿ ಮೀನಿನ ವಾಸನೆ ಬರುತ್ತಿದ್ದುದರಿಂದ ಅವಳನ್ನು ಮತ್ಸ್ಯಗಂಧಿ ಎಂದೂ ಕರೆಯುತ್ತಿದ್ದರು. ಅಂದು ಅವಳೇ ದೋಣಿ ನಡೆಸುತ್ತಿದ್ದಳು. ಆಕಸ್ಮಿಕವಾಗಿ ಪರಾಶರ ಮುನಿಗಳಿಗೂ, ಆಕೆಗೂ ಸಮಾಗಮವಾಯಿತು. ಆಕೆ ಗರ್ಭವತಿಯಾಗದೆ ಪುತ್ರವತಿಯಾದಳು. ಹಾಗೆ ಹುಟ್ಟಿದ್ದು ವ್ಯಾಸ ಮಹರ್ಷಿಗಳು. ಅವರು ಹುಟ್ಟುತ್ತಲೇ ದೊಡ್ಡವರಾದರು. ಕಪ್ಪಗಿದ್ದುದರಿಂದ ಅವರನ್ನು ಕೃಷ್ಣ ಎಂದೂ, ದ್ವೀಪದಲ್ಲಿ ಹುಟ್ಟಿದ್ದರಿಂದ ದ್ವೈಪಾಯನ ಎಂದೂ ಕರೆಯುತ್ತಾರೆ.

ವ್ಯಾಸರು, ತಂದೆ ಪರಾಶರ ಮಹರ್ಷಿಗಳಿಂದಲೇ ವೇದ, ವೇದಾಂತಗಳು, ಧರ್ಮಶಾಸ್ತ್ರಗಳನ್ನು ಕಲಿಯುತ್ತಾರೆ. ಮಗ